**All India Radio: Bangalore**
**National Bulletin In Kannada**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**10.10.2026  19.35 hrs**

**<>><><*><><<>**

ಮುಖ್ಯಾಂಶಗಳು

**೧. ಪ್ರಧಾನಮಂತ್ರಿ ನರೇಂದ್ರ ಮೋದಿ ನಾಳೆ ಚೆನ್ನೈ ಭೇಟಿ; ವಿವಿಧ ಯೋಜನೆಗಳ ಶಂಕುಸ್ಥಾಪನೆ, ಉದ್ಘಾಟನೆ**

**೨. ಜಾಗತಿಕ ಮಟ್ಟದಲ್ಲಿ ಪ್ರಸ್ತುತವಾಗಬಲ್ಲ ದೇಶೀಯ ಪರಿಹಾರ ಅಭಿವೃದ್ಧಿಪಡಿಸುವುದು ಅಗತ್ಯ - ಸಚಿವ ಡಾ.ಜಿತೇಂದ್ರ ಸಿಂಗ್**

**೩. ಕರ್ನಾಟಕದ ನಾಡಹಬ್ಬ, ವಿಶ್ವವಿಖ್ಯಾತ ಮೈಸೂರು ದಸರಾ ಆಚರಣೆಗೆ ಸಕಲ ಸಿದ್ಧತೆ**

**೪. ಎಎಫ್‌ಸಿ ೧೭ ವರ್ಷದೊಳಗಿನವರ ಮಹಿಳಾ ಏಷ್ಯನ್ ಕಪ್; ನಾಳೆ ನಡೆಯಲಿರುವ ಅರ್ಹತಾ ಪಂದ್ಯದಲ್ಲಿ ಭಾರತ - ಮಲೇಷ್ಯಾ ಸೆಣಸು**

**<>><><*><><<>**

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ನಾಳೆ ಚೆನ್ನೈಗೆ ಭೇಟಿ ನೀಡಲಿದ್ದು, ಪೂನಮಲ್ಲಿ ಮತ್ತು ವಡಪಳನಿ ನಡುವಿನ ೧೪.೫ ಕಿಲೋಮೀಟರ್ ಉದ್ದದ ಮೆಟ್ರೋ ರೈಲು ಸೇವೆಯನ್ನು ಲೋಕಾರ್ಪಣೆ ಮಾಡಲಿದ್ದಾರೆ. ಇದೇ ವೇಳೆ ವಿಡಿಯೋ ಕಾನ್ಫರೆನ್ಸ್ ಮೂಲಕ ಐದು ಅಮೃತ ಭಾರತ ರೈಲು ನಿಲ್ದಾಣಗಳನ್ನೂ ಅವರು ಉದ್ಘಾಟಿಸಲಿದ್ದಾರೆ. ಬಳಿಕ, ಪೋರೂರಿನಿಂದ ಪೂನಮಲ್ಲಿವರೆಗೆ ಮೆಟ್ರೋ ರೈಲಿನಲ್ಲಿ ಪ್ರಯಾಣಿಸಿ, ಪೋರೂರು ಬೈಪಾಸ್ ನಿಲ್ದಾಣಕ್ಕೆ ಮರಳಲಿದ್ದಾರೆ. ಪೋರೂರು ಕೆರೆಯ ಸಮೀಪದಲ್ಲಿರುವ ಜಲಕಂಠೇಶ್ವರ ಶಿವ ದೇವಾಲಯದಲ್ಲಿ ವಿಶೇಷ ದರ್ಶನ ಮತ್ತು ಪೂಜೆಯಲ್ಲಿಯೂ ಪ್ರಧಾನಮಂತ್ರಿ ಪಾಲ್ಗೊಳ್ಳುವ ನಿರೀಕ್ಷೆಯಿದೆ. ಚೆನ್ನೈನಲ್ಲಿ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ತಮಿಳುನಾಡು ಮುಖ್ಯಮಂತ್ರಿ ಸಿ.ಜೋಸೆಫ್ ವಿಜಯ್ ಭಾಗಿಯಾಗಲಿದ್ದಾರೆ. ನಂತರ, ಪ್ರಧಾನಮಂತ್ರಿ ಅವರು ಐಐಟಿ ಮದ್ರಾಸ್‌ನಲ್ಲಿರುವ ಬ್ರೈನ್ ಸೆಂಟರ್‌ಗೆ ಭೇಟಿ ನೀಡಿ, ಅಲ್ಲಿನ ಕಾರ್ಯಚಟುವಟಿಕೆಗಳನ್ನು ವೀಕ್ಷಿಸಲಿದ್ದಾರೆ. ಚೆನ್ನೈ ಕನ್ವೆನ್ಷನ್ ಸೆಂಟರ್‌ನಲ್ಲಿ ಹಲವು ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿ, ಕೆಲವು ಯೋಜನೆಗಳನ್ನು ರಾಷ್ಟ್ರಕ್ಕೆ ಸಮರ್ಪಿಸಲಿದ್ದಾರೆ. ನಾಳೆ ನಡೆಯಲಿರುವ ಜೈಗೋಪಾಲ್ ಗರೋಡಿಯಾ

ಸಂಭ್ರಮಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿದ ಬಳಿಕ ಪ್ರಧಾನಮಂತ್ರಿ ದೆಹಲಿಗೆ ತೆರಳಲಿದ್ದಾರೆ.

<>><><*><><<>

ವಿಕಸಿತ ಭಾರತ ೨೦೪೭ರ ಮುನ್ನೋಟದ ಸಾಕಾರಕ್ಕೆ ನಿಗದಿಪಡಿಸಿರುವ ರಾಷ್ಟ್ರೀಯ ಗುರಿಗಳನ್ನು ಸಾಧಿಸಲು ನಾವೀನ್ಯತೆಗೆ ವೇಗ ನೀಡಿ, ವೈಜ್ಞಾನಿಕ ಸಂಶೋಧನೆಗಳನ್ನು ವಾಣಿಜ್ಯ ಉದ್ಯಮಗಳಾಗಿ ಪರಿವರ್ತಿಸುತ್ತಾ ಭಾರತದ ತಾಂತ್ರಿಕ ಸಾಮರ್ಥ್ಯವನ್ನು ವಿಸ್ತರಿಸುವ ನಿಟ್ಟಿನಲ್ಲಿ ಉದ್ಯಮ ವಲಯ ಮುಂದೆ ಬರಬೇಕು ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ.ಜಿತೇಂದ್ರ ಸಿಂಗ್ ಕರೆ ನೀಡಿದ್ದಾರೆ. ನವದೆಹಲಿನಲ್ಲಿ ನಡೆದ ಪಿಎಚ್‌ಡಿ ವಾಣಿಜ್ಯ ಮತ್ತು ಕೈಗಾರಿಕಾ ಮಂಡಳಿಯ ೧೨೧ನೇ ವಾರ್ಷಿಕ ಸಭೆ ಉದ್ದೇಶಿಸಿ ಮಾತನಾಡಿದ ಅವರು, ತಾಂತ್ರಿಕ ಬೆಳವಣಿಗೆಯ ಮುಂದಿನ ಹಂತದಲ್ಲಿ ಇತರ ದೇಶಗಳು ಅಭಿವೃದ್ಧಿಪಡಿಸಿದ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವುದಕ್ಕೆ ಸೀಮಿತವಾಗದೇ, ಜಾಗತಿಕ ಮಟ್ಟದಲ್ಲಿ ಪ್ರಸ್ತುತವಾಗುವ ಸ್ವದೇಶಿ ಪರಿಹಾರಗಳನ್ನು ಅಭಿವೃದ್ಧಿಪಡಿಸುವತ್ತ ಗಮನ ಹರಿಸಬೇಕು ಎಂದು ಪ್ರತಿಪಾದಿಸಿದರು. ರಾಷ್ಟ್ರೀಯ ಕ್ವಾಂಟಮ್ ಮಿಷನ್‌ನ ಪ್ರಗತಿಯನ್ನು ಉಲ್ಲೇಖಿಸಿದ ಸಚಿವರು, ಎಂಟು ವರ್ಷಗಳಲ್ಲಿ ೨ ಸಾವಿರ ಕಿಲೋಮೀಟರ್ ಕ್ವಾಂಟಮ್ ಸುರಕ್ಷಿತ ಸಂವಹನ ವ್ಯವಸ್ಥೆ ಸಾಧಿಸುವ ಗುರಿಯ ಪೈಕಿ, ಕಳೆದ ಮೂರು ವರ್ಷಗಳಲ್ಲಿ ಭಾರತ ಈಗಾಗಲೇ ೧ ಸಾವಿರ ಕಿಲೋಮೀಟರ್ ದೂರದ ಕ್ವಾಂಟಮ್ ಸುರಕ್ಷಿತ ಸಂವಹನ ಸಾಮರ್ಥ್ಯವನ್ನು ಸಾಧಿಸಿದೆ ಎಂದು ಹೇಳಿದರು.

<>><><*><><<>

ಆಧುನಿಕ ಯುದ್ಧತಂತ್ರ ಮತ್ತು ಜಾಗತಿಕ ಭದ್ರತಾ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆಗಳ ನಡುವೆಯೂ ಜಗತ್ತಿನಾದ್ಯಂತದ ಬೆಳವಣಿಗೆಗಳು ಮತ್ತು ಅವುಗಳ ಕಾರ್ಯತಂತ್ರದ ಪರಿಣಾಮಗಳನ್ನು ಭಾರತ ನಿಕಟವಾಗಿ ಗಮನಿಸುತ್ತಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ. ಜೋಧ್‌ಪುರ ವಾಯುಪಡೆ ನಿಲ್ದಾಣದಲ್ಲಿ ನಡೆದ 'ತರಂಗ್ ಶಕ್ತಿ-೨೦೨೬' ಸಮರಾಭ್ಯಾಸ ಉದ್ದೇಶಿಸಿ ಮಾತನಾಡಿದ ಅವರು, ಆತ್ಮನಿರ್ಭರ ಭಾರತದ ಮುನ್ನೋಟದೊಂದಿಗೆ ಭಾರತೀಯ ಸಶಸ್ತ್ರ ಪಡೆಗಳ ರಚನೆ, ಸಾಮರ್ಥ್ಯ ಮತ್ತು ಕಾರ್ಯತಂತ್ರದ ವಿಧಾನಗಳಲ್ಲಿ ಮೂಲಭೂತ ಪರಿವರ್ತನೆ ನಡೆಯುತ್ತಿದೆ ಎಂದರು. ವಾಯುಪಡೆ ನಿಲ್ದಾಣದಲ್ಲಿ ವೈಮಾನಿಕ ಪ್ರದರ್ಶನ ವೀಕ್ಷಿಸಿದ ಬಳಿಕ ಮಾತನಾಡಿದ ರಕ್ಷಣಾ ಸಚಿವರು, ಈಗಿನ ಜಾಗತಿಕ ವ್ಯವಸ್ಥೆ ತ್ವರಿತವಾಗಿ ಬದಲಾಗುತ್ತಿದ್ದು, ಹೊಸ ಜಾಗತಿಕ ವ್ಯವಸ್ಥೆಯ ಸ್ವರೂಪ ಇನ್ನೂ ಅನಿಶ್ಚಿತವಾಗಿದೆ ಎಂದರು. ಆತ್ಮನಿರ್ಭರ ಭಾರತ ಎಂದರೆ ಜಗತ್ತಿನಿಂದ ಪ್ರತ್ಯೇಕವಾಗಿ ಇರುವುದಲ್ಲ ಎಂದು ಸ್ಪಷ್ಟಪಡಿಸಿದ ಅವರು, ಪ್ರಮುಖ ರಕ್ಷಣಾ ತಂತ್ರಜ್ಞಾನಗಳನ್ನು ದೇಶದಲ್ಲೇ ವಿನ್ಯಾಸಗೊಳಿಸುವುದು,

ಅಭಿವೃದ್ಧಿಪಡಿಸುವುದು, ಉತ್ಪಾದಿಸುವುದು, ನಿರ್ವಹಿಸುವುದು ಮತ್ತು ಉನ್ನತೀಕರಿಸುವ ಸಾಮರ್ಥ್ಯ ಹೊಂದುವುದಾಗಿದೆ ಎಂದು ವಿವರಿಸಿದರು. ಸೆಪ್ಟೆಂಬರ್ ೨೬ರಂದು ಆರಂಭವಾಗಿರುವ ಈ ಸಮರಾಭ್ಯಾಸ ಇದೇ ೧೨ರವರೆಗೆ ನಡೆಯಲಿದೆ. 'ಪಾಲುದಾರಿಕೆಯಲ್ಲಿ ಶಕ್ತಿ' ಎಂಬ ಧ್ಯೇಯವಾಕ್ಯದೊಂದಿಗೆ ನಡೆಯುತ್ತಿರುವ ಈ ಸಮರಾಭ್ಯಾಸವು ವಿವಿಧ ದೇಶಗಳ ವಾಯುಪಡೆಗಳ ನಡುವಿನ ಪರಸ್ಪರ ಕಾರ್ಯಾಚರಣೆಯ ಸಾಮರ್ಥ್ಯವನ್ನು ವರ್ಧಿಸುವ, ಸೇನಾ ಸಹಕಾರವನ್ನು ಬಲಪಡಿಸುವ ಮತ್ತು ಕಾರ್ಯಾಚರಣೆಯ ಪರಿಣತಿಯನ್ನು ವಿನಿಮಯ ಮಾಡಿಕೊಳ್ಳುವ ಉದ್ದೇಶ ಹೊಂದಿದೆ.

<>><><*><><<>

ಬ್ಯಾಂಕುಗಳು ಇದೇ ೧೬ರಿಂದ ಪ್ರತಿದಿನ ಶೇಕಡಾ ೯೯ರಷ್ಟು ನಗದು ಮೀಸಲು ಅನುಪಾತ ಹೊಂದುವುದು ಕಡ್ಡಾಯ ಎಂದು ಭಾರತೀಯ ರಿಸರ್ವ್ ಬ್ಯಾಂಕ್-ಆರ್‌ಬಿಐ ತಿಳಿಸಿದೆ. ಪ್ರಸ್ತುತ ಈ ಪ್ರಮಾಣ ಶೇಕಡಾ ೯೦ರಷ್ಟಿದೆ. ಬ್ಯಾಂಕಿಂಗ್ ವ್ಯವಸ್ಥೆಯಲ್ಲಿನ ಪ್ರಸ್ತುತ ನಗದು ಲಭ್ಯತೆ ಪರಿಸ್ಥಿತಿಯ ಪರಿಶೀಲನೆಯ ಬಳಿಕ ಆರ್‌ಬಿಐ ಈ ನಿರ್ಧಾರ ಕೈಗೊಂಡಿದೆ. ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಸುಲಭ ಲಭ್ಯ ನಗದು ಅಂದರೆ ಲಿಕ್ವಿಡಿಟಿ ಕಡಿಮೆ ಮಾಡುವುದು ಈ ಕ್ರಮದ ಉದ್ದೇಶವಾಗಿದೆ. ಅಕ್ಟೋಬರ್ ೮ರ ವೇಳೆಗೆ ಬ್ಯಾಂಕಿಂಗ್ ವ್ಯವಸ್ಥೆಯು, ಸುಮಾರು ೩ ಲಕ್ಷದ ೮೮ ಸಾವಿರ ಕೋಟಿ ರೂಪಾಯಿಯಷ್ಟು ಸುಲಭವಾಗಿ ಲಭ್ಯವಾಗಬಹುದಾದ ನಗದು ಹೊಂದಿತ್ತು.

<>><><*><><<>

ವಿಶ್ವ ವಿಖ್ಯಾತ ನಾಡಹಬ್ಬ ದಸರಾ ಮಹೋತ್ಸವ ಆಚರಣೆಗೆ ಕರ್ನಾಟಕ ಸಜ್ಜಾಗಿದೆ. ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ನಡೆಯುವ ಹತ್ತು ದಿನಗಳ ಈ ಉತ್ಸವವು ವೈವಿಧ್ಯಮಯ ಕಾರ್ಯಕ್ರಮಗಳು ಮತ್ತು ವಿವಿಧ ಪ್ರದರ್ಶನಗಳೊಂದಿಗೆ ಪ್ರವಾಸಿಗರನ್ನು ಸೆಳೆಯುತ್ತಿದೆ. ನಾಡ ಅಧಿದೇವತೆ ಚಾಮುಂಡೇಶ್ವರಿಯ ಸನ್ನಿಧಿಯಲ್ಲಿ ನಾಳೆ ಬೆಳಗ್ಗೆ ೧೧.೫೦ ರಿಂದ ಮಧ್ಯಾಹ್ನ ೧೨.೧೩ರವರೆಗೆ ಸಲ್ಲುವ ಶುಭ ಧನುರ್ ಲಗ್ನದಲ್ಲಿ ಕೊಪ್ಪಳದ ಗವಿಮಠದ ಸಂಸ್ಥಾನದ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮಿಗಳು ಚಾಮುಂಡೇಶ್ವರಿ ದೇವಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಈ ವರ್ಷದ ದಸರಾ ಮಹೋತ್ಸವದ ಕಾರ್ಯಕ್ರಮಗಳಿಗೆ ಚಾಲನೆ ನೀಡಲಿದ್ದಾರೆ. ಚಾಮುಂಡಿ ಬೆಟ್ಟ ಹಾಗೂ ಮೈಸೂರು ಅರಮನೆ ಸೇರಿದಂತೆ ಕಾರ್ಯಕ್ರಮಗಳು ನಡೆಯುವ ಎಲ್ಲಾ ವೇದಿಕೆಗಳು ಸಂಪೂರ್ಣವಾಗಿ ಸಜ್ಜುಗೊಂಡಿದೆ. ಈ ಬಾರಿಯ ಸಿಎಂ ಕಪ್ ರಾಜ್ಯಮಟ್ಟದ ದಸರಾ ಕ್ರೀಡಾಕೂಟ ಇದೇ ೧೪ರವರೆಗೆ ನಡೆಯಲಿದ್ದು, ಒಟ್ಟು ೨೮ ಕ್ರೀಡೆಗಳಲ್ಲಿ ನಾಲ್ಕೂವರೆ ಸಾವಿರಕ್ಕೂ ಅಧಿಕ ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ. ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ನಾಳೆ ಸಂಜೆ ಕ್ರೀಡಾಕೂಟಕ್ಕೆ ಅಧಿಕೃತ ಚಾಲನೆ

ನೀಡಲಿದ್ದಾರೆ. ಪ್ರವಾಸಿಗರ ಅನುಕೂಲಕ್ಕಾಗಿ ಪೊಲೀಸ್ ಇಲಾಖೆಯು ವಿಶೇಷ ವಿಸಿಟರ್ ಪೋರ್ಟಲ್ ಸೌಲಭ್ಯ ಕಲ್ಪಿಸಿದೆ. ಹಬ್ಬದ ಜನದಟ್ಟಣೆ ನಡುವಿನ ನೆಟ್ ವರ್ಕ್‌ನಲ್ಲಿಯೂ ಪೋರ್ಟಲ್ ಕಾರ್ಯನಿರ್ವಹಿಸುವಂತೆ ವ್ಯವಸ್ಥೆ ಮಾಡಲಾಗಿದೆ. ಶೃಂಗೇರಿ, ಹೊರನಾಡು, ಕಟೀಲು, ಕೊಲ್ಲೂರು, ಮೊದಲಾದ ಶಕ್ತಿ ದೇವತೆ ಕ್ಷೇತ್ರಗಳಲ್ಲಿ ನವರಾತ್ರಿಯ ವಿಶೇಷ ಪೂಜಾ ಕೈಂಕರ್ಯಗಳು ನೆರವೇರಲಿವೆ. ಮಂಗಳೂರಿನ ಕುದ್ರೋಳಿ, ವಿಶ್ವ ಪರಂಪರ ತಾಣ ಹಂಪಿ, ಮಡಿಕೇರಿ ಹಾಗೂ ಶ್ರೀರಂಗಪಟ್ಟಣಗಳಲ್ಲಿಯೂ ವೈವಿಧ್ಯಮಯವಾಗಿ ದಸರಾ ಆಚರಿಸಲಾಗುತ್ತದೆ.

<>><><*><><<>

ಉತ್ತರಾಖಂಡದ ಚಮೋಲಿ ಜಿಲ್ಲೆಯಲ್ಲಿರುವ ಪ್ರಸಿದ್ಧ ಸಿಖ್ ಯಾತ್ರಾ ಸ್ಥಳ ಹೇಮಕುಂಡ್ ಸಾಹಿಬ್‌ನ ದ್ವಾರಗಳನ್ನು ಚಳಿಗಾಲದ ಹಿನ್ನೆಲೆಯಲ್ಲಿ ಇಂದು ಮುಚ್ಚಲಾಗಿದೆ. ಧಾರ್ಮಿಕ ವಿಧಿವಿಧಾನಗಳಂತೆ ಮಧ್ಯಾಹ್ನ ೧೨.೩೦ಕ್ಕೆ ಅಂತಿಮ ಆರತಿ ಮಾಡಿ ಮಧ್ಯಾಹ್ನ ೧ ಗಂಟೆಗೆ ಕ್ಷೇತ್ರದ ದ್ವಾರಗಳನ್ನು ಮುಚ್ಚಲಾಯಿತು. ಈ ವರ್ಷದ ಮೇ ೨೩ರಂದು ಹೇಮಕುಂಡ್ ಸಾಹಿಬ್‌ನ ದ್ವಾರಗಳನ್ನು ಭಕ್ತರ ದರ್ಶನಕ್ಕಾಗಿ ತೆರೆಯಲಾಗಿತ್ತು. ಈ ಯಾತ್ರಾ ಋತುವಿನಲ್ಲಿ ಸುಮಾರು ೨ ಲಕ್ಷದ ೮೦ ಸಾವಿರ ಭಕ್ತರು ಪ್ರಾರ್ಥನೆ ಸಲ್ಲಿಸಿದ್ದಾರೆ.

<>><><*><><<>

’ಜನ ಸೇವೆಯೇ ದೇಶ ಸೇವೆ’ ಎಂಬ ಮನೋಭಾವದೊಂದಿಗೆ ನಾಗರಿಕರ ಅಭ್ಯುದಯಕ್ಕೆ ಬದ್ಧತೆಯಿಂದ ೨೫ ವರ್ಷಗಳ ಸಾರ್ವಜನಿಕ ಸೇವೆಯನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಪೂರೈಸಿದ್ದಾರೆ. ಸೇವೆ ಮತ್ತು ಉತ್ತಮ ಆಡಳಿತದ ಮುನ್ನೋಟದೊಂದಿಗೆ ೨೦೪೭ರ ವೇಳೆಗೆ ’ವಿಕಸಿತ ಭಾರತ’ ಗುರಿ ಸಾಧನೆಯತ್ತ ಸಾಗಲು ಸರ್ಕಾರ ಕಾರ್ಯಪ್ರವೃತ್ತವಾಗಿದೆ. ಈ ನಿಟ್ಟಿನಲ್ಲಿ ಹಲವು ವಲಯಗಳಲ್ಲಿ ಕೈಗೊಂಡಿರುವ ಮಹತ್ವದ ಸುಧಾರಣೆಗಳ ಕುರಿತ ಸರಣಿಯನ್ನು ಆಕಾಶವಾಣಿ ಪ್ರಸಾರ ಮಾಡುತ್ತಿದೆ. ಇಂದು ೨೦೨೫ರ ವಕ್ಫ್ ಸುಧಾರಣೆಗಳ ಬಗ್ಗೆ ಒಂದು ವರದಿ. ಹಿಂದಿನ ವಕ್ಫ್ ಕಾಯ್ದೆಯಲ್ಲಿನ ಲೋಪದೋಷಗಳನ್ನು ಸರಿಪಡಿಸಲು ೨೦೨೫ರ ಏಪ್ರಿಲ್ ೫ ರಂದು ಜಾರಿಗೆ ತರಲಾದ ವಕ್ಫ್ ತಿದ್ದುಪಡಿ ಕಾಯ್ದೆ-೨೦೨೫ರಡಿ ಪಾರದರ್ಶಕತೆಗೆ ಆದ್ಯತೆ ನೀಡಲಾಗಿದೆ. ಕೇಂದ್ರ ವಕ್ಫ್ ಮಂಡಳಿಗಳಲ್ಲಿ ಮುಸ್ಲಿಂ ಮಹಿಳೆಯರು ಮತ್ತು ಮುಸ್ಲಿಮೇತರರು ಸದಸ್ಯರಾಗಲು ಈ ಕಾಯ್ದೆ ಅನುವು ಮಾಡಿಕೊಟ್ಟಿದೆ. ಈ ಹೊಸ ಕಾಯ್ದೆಯಡಿ ಇನ್ನು ಮುಂದೆ ಸರ್ಕಾರಿ ವ್ಯಾಜ್ಯ ಭೂಮಿಯ ಮೇಲಿನ ಯಾವುದೇ ಹಕ್ಕುಗಳ ಪ್ರತಿಪಾದನೆಯನ್ನು ಕಲೆಕ್ಟರ್‌ಗಿಂತ ಹೆಚ್ಚಿನ ಶ್ರೇಣಿಯ ಅಧಿಕಾರಿಯೊಬ್ಬರು ಕೂಲಂಕಶವಾಗಿ ಪರಿಶೀಲಿಸಬೇಕಾಗುತ್ತದೆ. ಜೊತೆಗೆ ವಕ್ಫ್ ನಿರ್ಧಾರಗಳ ವಿರುದ್ಧ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ಇದೇ ಮೊದಲ ಬಾರಿ ನೇರ ಅವಕಾಶ

ಕಲ್ಪಿಸಲಾಗಿದೆ. ಈ ಕಾನೂನಾತ್ಮಕ ಸುಧಾರಣೆಗಳ ಜೊತೆಜೊತೆಗೇ ಸಮಗ್ರ ಡಿಜಿಟಲೀಕರಣ ಪ್ರಕ್ರಿಯೆಗಳೂ ನಡೆಯುತ್ತಿವೆ.

**<>><><*><><<>**

ಚೀನಾದಲ್ಲಿ ನಡೆಯಲಿರುವ ೨೦೨೬ರ ಎಎಫ್‌ಸಿ ೧೭ ವರ್ಷದೊಳಗಿನವರ ಮಹಿಳಾ ಏಷ್ಯನ್ ಕಪ್ ಫುಟ್‌ಬಾಲ್ ಪಂದ್ಯಾವಳಿಯಲ್ಲಿ ಪಾಲ್ಗೊಳ್ಳಲು ಅರ್ಹತಾ ಪಂದ್ಯ ನಾಳೆ ಮಲೇಷ್ಯಾದ ಎಂಪಿ ಸೆಲಾಯಾಂಗ್ ಕ್ರೀಡಾಂಗಣದಲ್ಲಿ ನಡೆಯಲಿದೆ.  ಈ ನಿರ್ಣಾಯಕ ಇ ಗುಂಪಿನ ಪಂದ್ಯದಲ್ಲಿ ಭಾರತದ ಮಹಿಳಾ ಫುಟ್‌ಬಾಲ್ ತಂಡ, ಆತಿಥೇಯ ಮಲೇಷ್ಯಾವನ್ನು ಎದುರಿಸಲಿದೆ. ಪಂದ್ಯದಲ್ಲಿ ಡ್ರಾ ಸಾಧಿಸಿದರೂ ಭಾರತಕ್ಕೆ ಅರ್ಹತೆ ಸಿಗಲಿದೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೬.೦೫ ಕ್ಕೆ <>*><>**